ಕೇಂದ್ರ ಬಜೆಟ್ ಮಂಡನೆ ವೇಳೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, "ಬಹುತೇಕರು ನಿರೀಕ್ಷಿಸುತ್ತಿರುವ ಆದಾಯ ತೆರಿಗೆ ವಿಷಯವನ್ನು ಈಗ ಪ್ರಸ್ತಾಪಿಸುತ್ತೇನೆ. ಆದಾಯ ತೆರಿಗೆ ಮಿತಿಯನ್ನು 7 ಲಕ್ಷ ರೂಪಾಯಿಗೆ ವಿಸ್ತರಿಸಲಾಗಿದೆ'' ಎನ್ನುತ್ತಿದ್ದಂತೆಯೇ ಸದನದಲ್ಲಿ ಚಪ್ಪಾಳೆಗಳ ಸುರಿಮಳೆಯಾಯಿತು. ಮಾತು ಮುಂದುವರಿಸಿದ ಅವರು, "ಆದರೆ, ಇದು ಹೊಸ ತೆರಿಗೆ ಪದ್ಧತಿಗೆ ಅನ್ವಯವಾಗಲಿದೆ'' ಎಂದರು. ದೊಡ್ಡ ಆಫರ್‌ಗಳನ್ನು ಹೊಂದಿರುವ ಜಾಹೀರಾತುಗಳನ್ನು ಗಮನಿಸಿದರೆ, ಅಲ್ಲೊಂದು ಷರತ್ತಿನ ಪುಟ್ಟದಾದ ಸ್ಟಾರ್ ಚಿಹ್ನೆ ಇರುತ್ತದೆ. ನಿರ್ಮಲಾ ಮೇಡಂ ಅವರ ಭರ್ಜರಿ ಆಫರ್‌ನಲ್ಲೂ ಷರತ್ತುಗಳು ಅನ್ವಯ!

ತೆರಿಗೆ ಲೆಕ್ಕಾಚಾರಗಳನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ತಪ್ಪಾಗಿ ಅರ್ಥ ಮಾಡಿಕೊಂಡರೆ ನಷ್ಟ ತಪ್ಪಿದ್ದಲ್ಲ. ಹೀಗಾಗಿಯೇ, ''ಈ ಜಗತ್ತಿನಲ್ಲಿ ಅರ್ಥ ಮಾಡಿಕೊಳ್ಳಲು ಕಷ್ಟವಾದ ದೊಡ್ಡ ಸಂಗತಿಯೆಂದರೆ ಅದು ಆದಾಯ ತೆರಿಗೆ'' ಎಂದು ಆಲ್ಬರ್ಟ್ ಐನ್‌ಸ್ಟೀನ್ ಅಂದೇ ಹೇಳಿದ್ದುದು. ''ತೆರಿಗೆ ಪಾವತಿಯು ಗಣಿತಜ್ಞನಿಗೂ ಕಷ್ಟದ ಸಂಗತಿಯಾಗಿದ್ದು, ಇದನ್ನು ತತ್ವಜ್ಞಾನಿಯ ಬಳಿಗೆ ತೆಗೆದುಕೊಂಡು ಹೋಗಬೇಕು'' ಎನ್ನುವುದೂ ಐನ್‌ಸ್ಟೀನ್ ಮಾತೇ.

ಎದುರಿನ ವ್ಯಕ್ತಿಯ ಮನಸ್ಸು ಮತ್ತು ತೆರಿಗೆ – ಈ ಎರಡೂ ಸಂಕೀರ್ಣ ಸಂಗತಿಗಳೇ ಆಗಿವೆ. ಅರ್ಥವಾಗದೇ ಹೋದರೆ ತೊಂದರೆಗಳು 'ಒನ್ ಪ್ಲಸ್ ಒನ್' ಆಫರ್ ರೂಪದಲ್ಲಿ ಮನೆಗೆ ನುಗ್ಗುತ್ತವೆ. ಪ್ರತಿ ಬಜೆಟ್ ಬಂದಾಗಲೂ ಯಾವುದು ಹೆಚ್ಚಳ, ಯಾವುದು ಅಗ್ಗ ಎಂದು ನೋಡುವ ಪರಿಪಾಟ ಸಾಮಾನ್ಯ. ಜಿಎಸ್‌ಟಿ ಬಂದ ಬಳಿಕ ದರ ಏರಿಳಿತಗಳು ಕೇವಲ ಬಜೆಟ್ ಒಂದನ್ನಷ್ಟೇ ಅವಲಂಬಿಸಿಲ್ಲ. ಜಿಎಸ್‌ಟಿ ಪರಿಷ್ಕರಣೆಯಾದಂತೆ ದರದ ಏರಿಳಿತ ಯಾವಾಗ ಬೇಕಾದರೂ ಆಗಬಹುದು. ಒಂದು ಅರ್ಧ ಕಾಫಿ ಕುಡಿದರೂ ಜಿಎಸ್‌ಟಿ ಕಟ್ಟಬೇಕಾದ ಕಾಲವಿದು. ಪ್ರತಿಯೊಂದಕ್ಕೂ ತೆರಿಗೆ ಕಟ್ಟಿಕಟ್ಟಿ ಸುಸ್ತಾದ ಜನರು, ತಮ್ಮ ಆದಾಯ ತೆರಿಗೆಯಲ್ಲಿ 1000 ರೂಪಾಯಿ ಉಳಿಸಲೂ ನಾನಾ ಸರ್ಕಸ್‌ಗಳನ್ನು ಮಾಡುತ್ತಾರೆ.

ಬಹುತೇಕ ಸರಕು–ಸೇವೆಗಳಿಗೆ ಜಿಎಸ್‌ಟಿಯಂಥ ಪರೋಕ್ಷ ತೆರಿಗೆಯಿದ್ದು, ಆದಾಯ ತೆರಿಗೆಯನ್ನು ರದ್ದು ಮಾಡಬೇಕು ಎಂದು ಕೆಲವು ಅರ್ಥಶಾಸ್ತ್ರಜ್ಞರು ವಾದಿಸುತ್ತಾರೆ. ಕೇಂದ್ರದಲ್ಲಿ ಪ್ರತಿಪಕ್ಷದಲ್ಲಿದ್ದಾಗ ಬಿಜೆಪಿ, ಆದಾಯ ತೆರಿಗೆ ವಿನಾಯಿತಿಯನ್ನು ವಿಸ್ತರಿಸುವುದಾಗಿ ಪದೇಪದೇ ಹೇಳಿತ್ತು. ಬಿಜೆಪಿ ಅಧಿಕಾರಕ್ಕೆ ಬಂದರೆ, ಆದಾಯ ತೆರಿಗೆ ವಿನಾಯಿತಿ ಮಿತಿ 10 ಲಕ್ಷ ರೂಪಾಯಿಗೆ ವಿಸ್ತರಣೆಯಾಗಬಹುದು ಎಂದು ಮೇಲ್ಮಧ್ಯಮ ವರ್ಗ ಕನಸು ಕಂಡಿತ್ತು. ಹೀಗೆ ಕನಸುಗಳನ್ನು ಬಿತ್ತುತ್ತಿದ್ದ ಬಿಜೆಪಿ ನಾಯಕ ಅರುಣ್‌ಜೇಟ್ಲಿ 2014ರಲ್ಲಿ "ನೇರ ತೆರಿಗೆಗಳನ್ನು ಕಡಿಮೆ ಮಾಡಬೇಕು. ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಹೆಚ್ಚಿಸಿದರೆ, ಮಧ್ಯಮ ವರ್ಗದ ಜನರು ತಮಗೆ ಉಳಿಯುವ ಹಣದಿಂದ ಖರೀದಿಯನ್ನು ಹೆಚ್ಚು ಮಾಡುತ್ತಾರೆ. ಇದರಿಂದ ಪರೋಕ್ಷ ತೆರಿಗೆಗಳು (ವ್ಯಾಟ್ ಅಥವಾ ಅಬಕಾರಿ ಸುಂಕ) ಏರಿಕೆಯಾಗುತ್ತದೆ'' ಎಂದಿದ್ದರು. ಅವರೇ ವಿತ್ತ ಸಚಿವರಾದರೂ, ಪರಿಸ್ಥಿತಿಯೇನೂ ಬದಲಾಗಲಿಲ್ಲ. ಹಣದುಬ್ಬರ ಏರಿಕೆಯ ಈ ದಿನಗಳಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಸರ್ಕಾರ ಹೆಚ್ಚಿಸುತ್ತದೆ. ಚುನಾವಣೆ ಹಿನ್ನೆಲೆಯಲ್ಲಿ ಮಧ್ಯಮ ವರ್ಗದವರ ತೆರಿಗೆ ಹೊರೆ ಇಳಿಸುತ್ತದೆ ಎಂದು ಬಹುತೇಕರು ನಿರೀಕ್ಷಿಸಿದ್ದರು. ಇಷ್ಟನ್ನು ಅರ್ಥ ಮಾಡಿಕೊಂಡಿರುವ ನಿರ್ಮಲಾ ಸೀತಾರಾಮನ್, ತೆರಿಗೆದಾರರ ಎಲೆಗೆ ಅರ್ಧ ಊಟವನ್ನು ಬಡಿಸಿದ್ದಾರೆ.

## ನಮ್ಮ ಮುಂದೆ ಎರಡು ಆಯ್ಕೆಗಳು

ವೇತನದಾರರು, ವ್ಯವಹಾರಸ್ಥರು, ಆಸ್ತಿಗಳಿಂದ ಬಾಡಿಗೆ ಪಡೆಯುವ ಜನರೂ ಸೇರಿದಂತೆ ಎಲ್ಲರೂ ತಮ್ಮ ಆದಾಯದ ಅನುಗುಣವಾಗಿ ತೆರಿಗೆಯನ್ನು ಪಾವತಿಸಬೇಕು. ತೆರಿಗೆ ಬರಲಿ, ಬರದೇ ಇರಲಿ, ಆದಾಯ ತೆರಿಗೆ ರಿಟರ್ನ್ (ಐಟಿಆರ್) ಅನ್ನು ಫೈಲ್ ಮಾಡಬೇಕು. ಮೊದಲಿನ ಆದಾಯ ತೆರಿಗೆ ಪಾವತಿ ಪದ್ಧತಿಯ ಜತೆಗೆ, ಹೊಸ ತೆರಿಗೆ ಪಾವತಿ ವ್ಯವಸ್ಥೆಯನ್ನು ಸರ್ಕಾರ ಎರಡು ವರ್ಷಗಳ ಹಿಂದೆ ಪರಿಚಯಿಸಿತು. ಆದರೆ, ಬಹುತೇಕರು ಹಳೆಯ ತೆರಿಗೆ ಪಾವತಿ ವ್ಯವಸ್ಥೆಯಲ್ಲಿಯೇ ಉಳಿದಿದ್ದರು. ''ಹೊಸ ತೆರಿಗೆ ಪಾವತಿ ವ್ಯವಸ್ಥೆಯನ್ನು ಆಕರ್ಷಕಗೊಳಿಸುವುದು ಸರ್ಕಾರದ ಉದ್ದೇಶ.

